**ದಿ: 06.08.2026 ರಂದು 1ನೇ ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟಿ ಸವಾಲು : ಪ್ರತಿವಾದಿ ಪರ ಶ್ರೀಯುತ ಹೆಚ್.ಎಂ., ವಕೀಲರಿಂದ.**

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ವ್ಯವಸಾಯ ಹೊರತುಪಡಿಸಿ ಚಿಕ್ಕದಾದ ಚಹಾ ಅಂಗಡಿ ವ್ಯಾಪಾರ ಮಾಡಿಕೊಂಡಿರುತ್ತೇನೆ. ಸದರಿ ಚಹಾ ಅಂಗಡಿ ನನ್ನ ಸ್ವಂತ ಅಂಗಡಿ ಎಂದರೆ ಸರಿ. ಪ್ರಸ್ತುತ ದಾವೆಗೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನು ಮತ್ತು ನನ್ನ ಅಣ್ಣ ಮಾಹಿತಿ ನೀಡಿರುತ್ತೇವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುತ್ತವೆ. ನೀವು ಪ್ರಸ್ತುತ ದಾವೆಯನ್ನು ಯಾವ ಪರಿಹಾರದ ಸಲುವಾಗಿ ದಾಖಲಿಸಿರುತ್ತೀರಾ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಯಾವ ಪರಿಹಾರ ಕೋರಿ ಸಲ್ಲಿಸಿರುವುದಿಲ್ಲ ಮತ್ತು ನನ್ನ ಜಮೀನಿನ ಅಳತೆ ಸರಿ ಬರದ ಮೇರೆಗೆ ಅಳತೆ ಸಲುವಾಗಿ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಅಳತೆ ಸರಿ ಇರುವುದಿಲ್ಲ ಎಂದು ಭೂಮಾಪನ ಇಲಾಖೆಗೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಭೂಮಾಪನ ಇಲಾಖೆಯವರು ದಾವಾ ಜಮೀನಿನ ಅಳತೆ ಸರಿ ಇರುವುದಿಲ್ಲ ಎಂದು ನೀಡಿದ ವರದಿಯ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಆ ರೀತಿ 2021-22ನೇ ಸಾಲಿನಲ್ಲಿ ಭೂಮಾಪನ ಅಧಿಕಾರಿಗಳು ದಾವಾ ಆಸ್ತಿಯನ್ನು ಅಳತೆ ಮಾಡಿರುತ್ತಾರೆ. ಸದರಿ ಭೂಮಾಪನ ಅಧಿಕಾರಿಗಳು ದಾವಾ ಜಮೀನನ್ನು ಸರ್ವೆ ಮಾಡಿ ನೀಡಿದ ವರದಿ ಮತ್ತು ಸರ್ವೆ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ನಾನು ಭೂಮಾಪನ ಅಧಿಕಾರಿಗಳು ದಾವಾ ಜಮೀನನ್ನು ಸರ್ವೆ ಮಾಡಿ ನೀಡಿದ ವರದಿ ಮತ್ತು ಸರ್ವೆ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಂತದಲ್ಲಿ ಪ್ರತಿವಾದ ಪರ ವಕೀಲರು ಸಾಕ್ಷಿಗೆ ವಾದಿಗಳ ಪರವಾಗಿ ನಿಶಾನೆ ಕರೆಸಲಾದವ ದಾಖಲೆಗಳನ್ನು ತೋರಿಸಿ ಸದರಿ ಭೂಮಾಪನ ಅಧಿಕಾರಿಗಳ ಸರ್ವೆ ವರದಿ ಮತ್ತು ನಕ್ಷೆಯನ್ನು ನೋಡಿ ಗುರುತಿಸುವಂತೆ ಸೂಚಿಸಿದ ಮೇರೆಗೆ ಸಾಕ್ಷಿಯು ದಾಖಲೆಗಳನ್ನು ನೋಡಿ ನಿಶಾನೆ ಕರೆಸದೆ ಇರುವ ಹೇಳಿಕೆಯ ದಾಖಲೆಯನ್ನು ನೋಡಿ ಭೂಮಾಪನ ಅಧಿಕಾರಿಗಳು ನೀಡಿದ ಮಹಜರು ಎಂದು ತಿಳಿಸಿರುತ್ತಾರೆ. ಸದರಿ ಮಹಜರನ್ನ ವಿರುದ್ದ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ನಾನು ಮಹಜರು ಮತ್ತು ಸರ್ವೆ ನಕ್ಷೆಯ ವಿರುದ್ಧ ದಾಖಲಿಸಿದ ಮೇಲ್ಮನವಿಯು ಭೂಮಾಪಕರು ಈ ಹಿಂದೆ ಮಾಡಿದ ಸರ್ವೆ ನಕ್ಷೆ ಸರಿ ಇರುತ್ತದೆ ಎಂದು ವಜಾಗೊಳಿಸಿರುತ್ತಾರೆ ಎಂದರೆ ಸರಿ. **ಪ್ರಕರಣದ ಅನುಕೂಲತೆಗಾಗಿ ಸಾಕ್ಷಿ ನೋಡಿ ಗುರುತಿಸಿದ ಹೇಳಿಕೆಯನ್ನು ನಿಪಿ.21 ಎಂದು ಗುರುತಿಲಾಯಿತು.** ಆ ರೀತಿ ಮೇಲ್ಮನವಿ ಪ್ರಾಧಿಕಾರವು ಮೇಲ್ಮನವಿಯನ್ನು ವಜಾಮಾಡಿದ ಮೇರೆಗೆ ನಿಪಿ.21 ನ್ನು ನಿಶಾನೆ ಕರೆಸಿರಲಿಲ್ಲ ಎಂದರೆ ಸರಿಯಲ್ಲ.

2. 1981ನೇ ಸಾಲಿನಲ್ಲಿ ನಿಪಿ.1 ರಂತೆ ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿಸಿದ್ದರು. ಆ ರೀತಿ ನಿಪಿ.1 ರಂತೆ ದಾವಾ ಆಸ್ತಿಯನ್ನು ಖರೀದಿಸಿದ ನಂತರ ಹದ್ದುಬಸ್ತು ಮತ್ತು ಪೋಡಿ ದುರಸ್ತಿಯನ್ನು ಮಾಡಿಸಿರುವುದಿಲ್ಲ. ಆ ರೀತಿ ದಾವಾ ಆಸ್ತಿಯನ್ನು ಪೌತಿ ವಾರಸು ಮೂಲಕ ನಿಮ್ಮ ಹೆಸರಿಗೆ ಬದಲಾವಣೆ ಮಾಡಿಕೊಳ್ಳುವ ಸಮಯದಲ್ಲಿ ಹದ್ದು ಮತ್ತು ಪೋಡಿ ದುರಸ್ತಿಯನ್ನು ಮಾಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ರೀತಿ ಹದ್ದುಬಸ್ತು ಮತ್ತು ಪೋಡಿ ದುರಸ್ತಿ ಮಾಡಲು

ಹೋದಾಗ ಕಡಿಮೆಯಾಗಿರುವುದು ಕಂಡುಬಂದಿತ್ತು ಎಂದು ನುಡಿಯುತ್ತಾರೆ. 2016 ರಿಂದ 2022ನೇ ಸಾಲಿನಲ್ಲಿ ದಾವಾ ಆಸ್ತಿಯ ಹದ್ದುಬಸ್ತು ಪೋಡಿ ದುರಸ್ತಿಯನ್ನು ಮಾಡಿಸಿರುವುದಿಲ್ಲ. 1981ನೇ ಸಾಲಿನಲ್ಲಿ ದಾವಾ ಆಸ್ತಿಯ ವಿಸ್ತೀರ್ಣ 4.30 ಎಕರೆ ವಿಸ್ತೀರ್ಣವಿತ್ತು. ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಯಾವುದೇ ನಕ್ಷೆ ಮಾಡಿಸಿರುವುದಿಲ್ಲ. ಸಾಕ್ಷಿಯು ಸ್ವಲ್ಪ ಸಮಯದ ನಂತರ ನನ್ನ ತಂದೆ ಮತ್ತು ಚಿಕ್ಕಪ್ಪ ನಕ್ಷೆ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ದಾವಾ ಆಸ್ತಿಯ ಸರ್ವೆ ನಕ್ಷೆ ಮಾಡಿಸಿದ್ದರು ಎಂದು ಹೇಳುವ ಸರ್ವೆ ನಕ್ಷೆ ದಾಖಲೆಯನ್ನು ನ್ಯಾಯಲಾಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಮಾಡಿಸಿದ್ದರು ಎಂದು ಹೇಳುವ ದಾವಾ ಆಸ್ತಿಯ ಯಾವುದೇ ಸರ್ವೆ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿಯು ದಾವಾ ಜಮೀನಿನ ಪಕ್ಕದಲ್ಲಿರುವ 2.30 ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಯು ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸರ್ವೆ ನಂ. 130 ಜಮೀನನ್ನು ಪೋಡಿ ದುರಸ್ತಿ ಮಾಡಿಸಿ ಸರ್ವೆ ನಂ.130/2 ಎಂದು ಪೋಡಿ ದುರಸ್ತಿಯಾಗಿ ನಕ್ಷೆಯಾದ ನಂತರ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಪ್ರತಿವಾದಿಯು ಪೋಡಿ ದುರಸ್ತಿ ಮಾಡಿಸಿದ್ದ ನಂತರ ಪ್ರತಿವಾದಿಯ ಜಮೀನಿಗೆ 130/2 ಎನ್ನುವ ಪೋಡಿ ಸರ್ವೆ ಸಂಖ್ಯೆಯನ್ನು ನೀಡಲಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಜಮೀನಿನ ಪೋಡಿ ದುರಸ್ತಿ ಮಾಡುವ ಸಮಯದಲ್ಲಿ ಸಂಬಂಧಿಸಿದ ಜಮೀನಿನ ಹಾಜುಬಾಜುದಾರರಿಗೆ ನೋಟಿಸ್ಸು ನೀಡುತ್ತಾರೆ ಎಂದರೆ ಸರಿ. ಈ ನನಗೆ ತೋರಿಸಿದ ನಕ್ಷೆ ಮತ್ತು ಮಹಜರು ನನ್ನ ಅಣ್ಣನ ಸಹಿಯನ್ನು ಪಡೆದುಕೊಂಡು ಮಾಡಿದ ನಕ್ಷೆಯಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಕ್ಷೆ ಮತ್ತು ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಕ್ರಮವಾಗಿ ನಿಡಿ.1 ಮತ್ತು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.1 ಮತ್ತು 2 ಪೋಡಿ ದುರಸ್ತಿಯಾದ ನಂತರ ನಾವುಗಳು ಪೌತಿ ಖಾತೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಪ್ರತಿವಾದಿಯು 2.30 ಎಕರೆ ಜಮೀನನ್ನು ಖರೀದಿಸಿದ ದಿನದಿಂದ ಸುಮಾರು 2001 ರಿಂದ 2021ನೇ ಸಾಲಿನವರೆಗೆ ಪ್ರತಿವಾದಿಯು ಜಮೀನಿನಲ್ಲಿ ಮಾವಿನ ಕೃಷಿಮಾಡಿಕೊಂಡು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ.

4. ದಾವಾ ಜಮೀನಿನ ಪೂರ್ವ ದಿಕ್ಕಿನಲ್ಲಿ ರೇಖಾ ಕೋಂ ಬೈರೇಗೌಡ ಎನ್ನುವವರು ಪ್ರತಿವಾದಿ ಜಮೀನಿನ 2.30 ಎಕರೆ ಜಮೀನಿನ ಪೈಕಿ 20 ಗುಂಟೆ ಜಮೀನನ್ನು ಭೋಗ್ಯಕ್ಕೆ ಪಡೆದುಕೊಂಡು ಪೆಟ್ರೋಲ್ ಬಂಕನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನಡೆಸುತ್ತಿರುವ ಚಹಾ ಅಂಗಡಿಯ ಪೂರ್ವ ದಿಕ್ಕಿನಲ್ಲಿ ಪೆಟ್ರೋಲ್ ಬಂಕ್ ಇದೇ ಎಂದರೆ ಸರಿ. ಆ ರೀತಿ ಪೆಟ್ರೋಲ್ ಬಂಕ್ ಇರುವ ವಿಚಾರ ನನಗೆ ತಿಳಿದಿದ್ದರು ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರೇಖಾ ಕೋಂ ಬೈರೇಗೌಡ ರವರು ಭೋಗ್ಯಕ್ಕೆ ಪಡೆದುಕೊಂಡು 20 ಗುಂಟೆ ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಸದರಿ ಪೆಟ್ರೋಲ್ ಬಂಕನ್ನು ಪ್ರಾರಂಭಿಸುವ ಪೂರ್ವದಲ್ಲಿ ಪ್ರತಿವಾದಿ ಜಮೀನಿನ ಸರ್ವೆ ನಕ್ಷೆ ಮಾಡಿಸಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮೋದಿತ ನಕ್ಷೆಯನ್ನು ಪಡೆದುಕೊಂಡು ಪೆಟ್ರೋಲ್ ಬಂಕನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ನನಗೆ ತೊರಿಸಿದ ದಾಖಲೆ ಸದರಿ ಪೆಟ್ರೋಲ್ ಬಂಕ್ ಜಾಗದ ಕುರಿತು ಸರ್ವೆ ಇಲಾಖೆಯವರು ತಯಾರಿಸಿದ ನಕ್ಷೆಗಳಾಗಿರುತ್ತವೆ ಎಂದರೆ ಸರಿ. ಸದರಿ 4 ಸರ್ವೆ ನಕ್ಷೆಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ನಿಡಿ.3 ರಿಂದ ನಿಡಿ.6 ಎಂದು ಗುರುತಿಸಲಾಯಿತು. ನಿಡಿ.3 ರಿಂದ 6 ದಾಖಲೆಯಂತೆ ರೇಖಾರವರ ಹೆಸರಿಗೆ ಇ-ಖಾತೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ನನಗೆ ತೋರಿಸಿದ ದಾಖಲೆ ಸದರಿ ರೇಖಾ ರವರ ಹೆಸರಿಗೆ ಭೋಗ್ಯದ ಕರಾರು ಪತ್ರದಂತೆ

ಆಗಿರುವ ಇ-ಖಾತೆ ಎಂದರೆ ಸರಿ. ಸದರಿ ರೇಖಾ ರವರ ಹೆಸರಿನಲ್ಲಿರು ಇ-ಖಾತೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಡಿ.7 ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಇ-ಖಾತೆ ಮಾಡುವ ಪೂರ್ವದಲ್ಲಿ ಜಮೀನಿನ ಸ್ಥಳ ತನಿಖೆ ಮಾಡಿ ನಕ್ಷೆಯನ್ನು ತಯಾರಿಸಿ ಖಾತೆಯನ್ನು ಮಾಡಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಭೂಮಾಪನ ಇಲಾಖೆಗೆ ಯಾವುದೇ ಅರ್ಜಿ ನೀಡದೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ ಯಲ್ಲ. ನಾನು ಸದರಿ ರೇಖಾರವರು ನಮ್ಮ ಜಮೀನಿನಲ್ಲಿ ಪೆಟ್ರೋಲ್ ಬಂಕನ್ನು ಸ್ಥಾಪಿಸದ ಮೇರೆಗೆ ಪ್ರತಿವಾದಿ ವಿರುದ್ಧ ದ್ವೇಷ ಸಾಧಿಸುತ್ತ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.19 ರಲ್ಲಿ ನಾನು ನಿಂತ್ತಿರುವ ಎಡಗಡೆಯಾದ ಪೂರ್ವ ದಿಕ್ಕಿಗೆ ಕಾಂಪೌಡ್ ಗೋಡೆ ಇರುತ್ತದೆ ಎಂದರೆ ಸರಿ. ಸದರಿ ಕಾಂಪೌಡ್ ಗೋಡೆ ಆ ನಂತರ ಇರುವ ಜಮೀನು ಪ್ರತಿವಾದಿ ಆಸ್ತಿಯಾಗಿರುತ್ತದೆ ಎಂದರೆ ಸರಿ. ನಾನು 2015ನೇ ಸಾಲಿನಲ್ಲಿ ನಮ್ಮ ಜಮೀನನ್ನು ಅಳತೆ ಮಾಡಿ ಕಾಂಪೌಡನ್ನು ನಿರ್ಮಸಿರುತ್ತೇನೆ ಎಂದರೆ ಸಾಕ್ಷಿಯು ಪ್ರತಿವಾದಿ ಕಾಂಪೌಡ್ ಗೋಡೆಯನ್ನು ನಿರ್ಮಸಿರುತ್ತಾರೆ ಎಂದು ನುಡಿಯುತ್ತಾರೆ.

5. ಈ ನನಗೆ ತೋರಿಸಿದ ನಿಪಿ.19 ರಲ್ಲಿನ ಕಾಂಪೌಡ್ ಗೋಡೆಯ ಪಶ್ಚಿಮ ದಿಕ್ಕಿನಲ್ಲಿರುವ ಟೀ ಅಂಗಡಿ ನನ್ನದಾಗಿರುತ್ತದೆ ಎಂದರೆ ಸರಿ. ನನ್ನ ಜಾಗದಲ್ಲಿ 6 ಅಂಗಡಿಗಳನ್ನು ನಿರ್ಮಸಿರುತ್ತೇನೆ. ನಾನು 6 ಅಂಗಡಿಗಳನ್ನು ನಿರ್ಮಸಿಸುವ ಪೂರ್ವದಲ್ಲಿ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿರುತ್ತೇನೆ. 2022 ನೇ ಸಾಲಿನಲ್ಲಿ ಸದರಿ 6 ಅಂಗಡಿಗಳನ್ನು ನಿರ್ಮಸಿರುತ್ತೇನೆ. ಪ್ರತಿವಾದಿ ರೇಖಾರವರಿಗೆ ಜಮೀನನ್ನು ಭೋಗ್ಯಕ್ಕೆ ನೀಡಿದ ನಂತರ ನಾನು ಅಂಗಡಿಗಳನ್ನು ನಿರ್ಮಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿ ತನ್ನ ಜಮೀನಿನಲ್ಲಿ ಪೆಟ್ರೋಲ್ ಬಂಕ್ ನಿರ್ಮಿಸುತ್ತಾರೆ ಎನ್ನುವ ಮತ್ಸರದಿಂದ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.